**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5005/2026**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | : | ಎಸ್.ಎ. ಸುಪ್ರಿತ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ತಂದೆ ಹೆಸರು** | : | ಅಶೋಕ ಕುಮಾರ್ | 23.07.2026 | |
| **ವಯಸ್ಸು** | : | 31 ವರ್ಷ | | |
| **ವೃತ್ತಿ** | : | ಪಿ.ಎಸ್.ಐ, ಕೊಳ್ಳೇಗಾಲ ಗ್ರಾಮಾಂತರ ಪೊ.ಠಾಣೆ | **ಫ್ರಾ.ಸಾಃ** | 11 |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ** | 13 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 12.08.2024 ರಿಂದ ಪಿ.ಎಸ್.ಐ ಆಗಿ ಕೊಳ್ಳೇಗಾಲ ಗ್ರಾಮಾಂತರ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 13.06.2025 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ 12 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿಃ 16.06.2025 ರಂದು ಚಾಸಾ 4 ರವರು ತೋರಿಸಿದಂತೆ ಚಾಸಾ 7 ಮತ್ತು 8 ರವರ ಸಮಕ್ಷಮ ಮಧ್ಯಾಹ್ನ 2.30 -3.00 ಗಂಟೆ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಜರುಗಿಸಿ ಸ್ಥಳದಿಂದ ಒಂದು ಚಪ್ಪಲಿಯನ್ನು ಮತ್ತು ಒಂದು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರ್ ಅನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ಮುದ್ದೆಮಾಲುಗಳನ್ನು ಮು.ಮಾ 1 ಮತ್ತು 2 ಎಂದು

ಈಗಾಗಲೇ ಗುರುತಿಸಲಾಗಿದೆ. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ಈಗಾಗಲೇ ನಿಪಿ 5 ಮತ್ತು 6 ಎಂದು ಗುರುತಿಸಲಾಗಿದೆ. ನಂತರ ವಶಪಡಿಸಿಕೊಂಡ ಮುದ್ದೆಮಾಲುಗಳ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ 9 ರವರಿಂದ ಭಾವಚಿತ್ರಗಳ ಸಂಬಂಧ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 63(4) (ಸಿ) ರಂತೆ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ 12 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 12(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಭಾವಚಿತ್ರ ಮತ್ತು ವಿಡಿಯೋ ಸಂಬಂಧ ನ್ಯಾಯಾಲಯಕ್ಕೆ ನೀವೆದನೆ ಸಲ್ಲಿಸಿರುತ್ತೇನೆ. ಚಾಸಾ 4 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಚಾಸಾ 4 ರವರು ನಿಪಿ 3 ರಂತೆ ಹೇಳಿಕೆ ಕೊಟ್ಟಿರುತ್ತಾರೆ.

ದಿಃ 18.06.2025 ರಂದು ಚಾಸಾ 1 ರವರ ಮರುಹೇಳಿಕೆ ಮಾಡಿಕೊಂಡಿರುತ್ತೇನೆ. ಅದೇ ಚಾಸಾ 5 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಚಾಸಾ 5 ರವರು ನಿಪಿ 4 ರಂತೆ ಹೇಳಿಕೆಯನ್ನು ನೀಡಿರುತ್ತಾರೆ.

ದಿಃ 20.06.2025 ರಂದು ಚಾಸಾ 2, 3 ಮತ್ತು 6 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

ದಿಃ 07.07.2025 ರಂದು ಚಾಸಾ 11 ರವರಿಂದ ಚಾಸಾ 1 ರಿಂದ 3 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಗಾಯದ ಪ್ರಮಾಣ ಪತ್ರಗಳನ್ನು ಈಗಾಗಲೇ ನಿಪಿ 7 ರಿಂದ 09 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಗಳನ್ನು ನಿಪಿ 7(ಬಿ) ರಿಂದ 9(ಬಿ) ಎಂದು ಗುರುತಿಸಲಾಯಿತು.

ದಿಃ 01.08.2025 ರಂದು ಚಾಸಾ 1 ರವರು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಹೇಳಿಕೆಯನ್ನು ಈಗಾಗಲೇ ನಿಸಿ 1 ಎಂದು ಗುರುತಿಸಲಾಗಿದೆ.

ದಿಃ 04.11.2025 ರಂದು ಚಾಸಾ 2 ರವರು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಹೇಳಿಕೆಯನ್ನು ಈಗಾಗಲೇ ನಿಸಿ 2 ಎಂದು ಗುರುತಿಸಲಾಗಿದೆ.

ದಿಃ 29.11.2025 ರಂದು ಚಾಸಾ 10 ರವರಿಂದ ಪಹಣಿಯನ್ನು ಪಡೆದಿರುತ್ತೇನೆ. ಪಹಣಿಯನ್ನು  ನಿಪಿ 13 ಎಂದು ಸಾಕ್ಷಿ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು.

ದಿಃ 04.12.2025 ರಂದು ತನಿಖೆ ಪೂರ್ಣಗೊಳಿಸಿ ದೊ.ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ- ಆರೋಪಿಯಿಂದ**

ದಿಃ **16.06.2025** ರಂದು ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ ಯಾವುದೇ ಮಹಜರ್ ಅನ್ನು ಬರೆದಿಲ್ಲ, ಮು.ಮಾ **1** ಮತ್ತು **2** ಅನ್ನು ಸ್ಥಳದಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ **2** ಮಹಜರ್ ಅನ್ನು ಮತ್ತು ಮುದ್ದೆಮಾಲುಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಯಾವುದೇ ಆರೋಪಿ ಸಾಭಿತಾಗದೇ ಇದ್ದರೂ ಸುಳ್ಳು ದೊ.ಪಟ್ಟಿಯನ್ನು ಸಲ್ಲಿಸಿದ್ದೇನೆ

ಎಂದರೆ ಸರಿಯಲ್ಲ. ಚಾಸಾ 3 ರವರು ಪಾಶ್ವವಾಯ ಪಿಡಿತರಾಗಿದ್ದು ಅವರಿಗೆ ಓಡಾಡಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ